2018 ಕ.ತೀ.ವ 64

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

ಶ್ರೀ ಸುನೀಲ್ ಮತ್ತು ಇತರರು –ವಿರುದ್ಧ– ಮೆಸರ್ಸ್ ಹೋಟೆಲ್ ಅರ್ಪನ್ ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ 6ನೇ ಪ್ರಕರಣ ಹಾಗೂ ಕರ್ನಾಟಕ ನ್ಯಾಯಾಲಯ ಶುಲ್ಕಗಳ ಮತ್ತು ದಾವೆಗಳ ಮೌಲ್ಯಮಾಪನ ಅಧಿನಿಯಮ, 1958ರ 28ನೇ ಪ್ರಕರಣ.

ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರರು, ದಾವೆಯನ್ನು ಅಧಿವಿಚಾರಿಸಲು ಹಾಗೂ ಪುರಸ್ಕರಿಸಲು ಮೌಲ್ಯಧಾರಿತ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಅಭಿಪ್ರಾಯಪಡುವುದರ ಮೂಲಕ ವಾದಪತ್ರವನ್ನು ಹಿಂದಿರುಗಿಸಲು ನ್ಯಾಯಾಲಯವನ್ನು ಕೋರಿ ಸಿವಿಲ್ ಪ್ರಕ್ರಿಯಾ ಸಂಹಿತೆಯ VIIನೇ ಕ್ರಮಾದೇಶದ 10ನೇ ನಿಯಮದಡಿಯಲ್ಲಿ ಅವರು ಸಲ್ಲಿಸಿರುವ ಐ.ಎ.ಸಂ.7ನ್ನು ತಿರಸ್ಕರಿಸಿ ಅಧೀನ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಪ್ರಶ್ನಿಸಿರುತ್ತಾರೆ. ಪ್ರತಿವಾದಿಗಳು, ದಾವೆಯನ್ನು ಯುಕ್ತವಾಗಿ ಮೌಲ್ಯಮಾಪನ ಮಾಡಿರುವುದಿಲ್ಲವೆಂದೂ, ಸಂದಾಯ ಮಾಡಿರುವ ನ್ಯಾಯಾಲಯ ಶುಲ್ಕ ಯುಕ್ತವಾಗಿಯೂ ಹಾಗೂ ಸರಿಯಾಗಿಯೂ ಇಲ್ಲವೆಂದು ವಾದಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಗಳ ಈ ವಾದವನ್ನು ನಿರಾಕರಿಸಿ, ಕರ್ನಾಟಕ ನ್ಯಾಯಾಲಯಗಳ ಶುಲ್ಕಗಳು ಹಾಗೂ ದಾವೆಗಳ ಮೌಲ್ಯಮಾಪನ, 1958 (ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ನ್ಯಾಯಾಲಯಗಳ ಶುಲ್ಕಗಳ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ)ದ 41 (1)(ಡಿ) ಪ್ರಕರಣದಡಿಯಲ್ಲಿ ದಾವೆಯನ್ನು ಮೌಲ್ಯಮಾಪನ ಮಾಡುವ ಮೂಲಕ ವಾದಿಗಳು ಸಂದಾಯ ಮಾಡಿರುವ ನ್ಯಾಯಾಲಯ ಶುಲ್ಕವು ಸರಿಯಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ.

*ರಿಟ್ ಅರ್ಜಿ ಸಂಖ್ಯೆ: 109654/2014 (ಜಿಎಂ–ಸಿಪಿಸಿ), ದಿನಾಂಕ: 13ನೇ ಜನವರಿ, 2016.

ಈ ದಾವೆಯನ್ನು, ಇಲ್ಲಿನ ಅರ್ಜಿದಾರರ ವಿರುದ್ಧ 1 ರಿಂದ 4ರ ವರೆಗಿನ ಪ್ರತ್ಯರ್ಜಿದಾರರು, ಅಲ್ಲದೆ 5ನೇ ಪ್ರತ್ಯರ್ಜಿದಾರರು, ನಿರ್ದಿಷ್ಟ ಪರಿಹಾರ ಅಧಿನಿಯಮದ 6ನೇ ಪ್ರಕರಣದಡಿಯಲ್ಲಿ, ಪ್ರತಿವಾದಿಗಳು ವಾದಿಗಳನ್ನು ಕಾನೂನು ಬಾಹಿರವಾಗಿ ಸ್ವಾಧೀನ ತಪ್ಪಿಸಿರುತ್ತಾರೆಂದು ಆಪಾದಿಸಿ ವಾದಿಗಳಿಗೆ ದಾವಾ ಸ್ವತ್ತಿನ ರಿಕ್ತ ಅಧಿಭೋಗವನ್ನು ಕೂಡಲೇ ಹಸ್ತಾಂತರಿಸಲು ಪ್ರತಿವಾದಿಗಳಿಗೆ ನಿರ್ದೇಶನ ಕೋರಿ ಸಲ್ಲಿಸಲಾಗಿರುತ್ತದೆ. ವಾದಿಗಳು ದಾವಾ ಅನುಸೂಚಿತ ಆವರಣದಲ್ಲಿನ ಬಾಡಿಗೆದಾರರಾಗಿದ್ದು, ಪ್ರತಿವಾದಿಗಳು ಅವರನ್ನು ಕಾನೂನು ಬಾಹಿರವಾಗಿ 1ನೇ ಫೆಬ್ರವರಿ 2014 ರಂದು ಸ್ವಾಧೀನ ತಪ್ಪಿಸಿರುತ್ತಾರೆಂಬುದು ವಾದಿಗಳ ವಾದವಾಗಿರುತ್ತದೆ.

ಯಾವುದೇ ಸ್ಥಿರಾಸ್ತಿಯನ್ನು ಒಬ್ಬ ವ್ಯಕ್ತಿಯ ಸಮ್ಮತಿಯಿಲ್ಲದೆ ಕಾನೂನು ಬಾಹಿರವಾಗಿ ಸ್ವಾಧೀನ ತಪ್ಪಿಸಿಕೊಂಡಂಥ ಆತನು, ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ 6ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಂದ ಸ್ವಾಧೀನ ತಪ್ಪಿದ ದಿನಾಂಕದಿಂದ ಆರು ತಿಂಗಳೊಳಗೆ ದಾವೆಯನ್ನು ಸಲ್ಲಿಸುವ ಮೂಲಕ ಸದರಿ ಸ್ವತ್ತಿನ ಸ್ವಾಧೀನವನ್ನು ಮರಳಿಪಡೆಯುವ ಹಕ್ಕಿನೊಂದಿಗೆ ಉಪಭೋಗಿಸಿರುತ್ತಾನೆಂಬುದು ಹಾಗೂ ಅಂಥ ದಾವೆಯನ್ನು ಹೊರಡಿಸಿದ ಡಿಕ್ರಿಯು ವಿರುದ್ಧ ಯಾವುದೇ ಅಪೀಲನ್ನು ಹೂಡತಕ್ಕದ್ದಲ್ಲವೆಂಬುದು ತಿಳಿದುಬಂದಿರುತ್ತದೆ.

ನ್ಯಾಯಾಲಯ ಶುಲ್ಕಗಳ ಅಧಿನಿಯಮದ 28ನೇ ಪ್ರಕರಣದಡಿಯಲ್ಲಿ ಮೌಲ್ಯ ಮಾಪನಮಾಡಲು ದಾವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬಹುದಾದ ಶುಲ್ಕವು 41 (1)(ಡಿ) ಪ್ರಕರಣದಡಿಯಲ್ಲಿ ಸಂದಾಯ ಮಾಡಬಹುದಾದುದಕ್ಕಿಂತ ಹೆಚ್ಚಿನದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ವಾದಿಯನ್ನು ಹೆಚ್ಚಿನ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಿದ ಕಾರಣದಿಂದಲೇ, ಆತನಿಗೆ 41(1)(ಡಿ) ಪ್ರಕರಣದಡಿಯಲ್ಲಿ ದಾವೆಯನ್ನು ಮೌಲ್ಯಮಾಪನ ಮಾಡಲು ಅವಕಾಶ ನೀಡಿರುವುದಿಲ್ಲ. ಏಕೆಂದರೆ ಕಾನೂನು 28ನೇ ಪ್ರಕರಣದಡಿಯಲ್ಲಾಗಲೀ ಅಥವಾ 41(1)(ಡಿ) ಪ್ರಕರಣದಡಿಯಲ್ಲಾಗಲೀ ದಾವೆಯನ್ನು ಮೌಲ್ಯ ಮಾಪನ ಮಾಡುವ ಅವಕಾಶವನ್ನು ಆತನಿಗೆ ನೀಡಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು, 28ನೇ ಪ್ರಕರಣವನ್ನು ಅಧಿನಿಯಮಿತಿಗೊಳಿಸಿರುವ ಶಾಸಕಾಂಗದ ಉದ್ದೇಶ ಹಾಗೂ ಗುರಿಯನ್ನು ಗಮನಕ್ಕೆ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು

ಹೊರಡಿಸಿರುವ ಆದೇಶವು ದೋಷಪೂರ್ಣವಾಗಿರುತ್ತದೆ. ವಾದಿಯನ್ನು, ಸ್ವತ್ತಿನ ಮಾರುಕಟ್ಟೆ ಮೌಲ್ಯದ ಒಂದೂವರೆಯಷ್ಟು ಅಥವಾ 1000/– ರೂ.ಗಳೂ ಇದರಲ್ಲಿ ಯಾವುದು ಹೆಚ್ಚೋ ಅದನ್ನು ಸಂದಾಯ ಮಾಡುವ ಮೂಲಕ 28ನೇ ಪ್ರಕರಣದಡಿಯಲ್ಲಿ ಕೋರಿದ ಪರಿಹಾರದ ಮೌಲ್ಯ ನಿಗದಿಗೆ ಅಗತ್ಯಪಡಿಸಲಾಗಿರುತ್ತದೆ.

ವಾದಪತ್ರವನ್ನು ಹಿಂತಿರುಗಿಸುವುದಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯನ್ನು ಗಮನಿಸಿದಾಗ, ಅಧೀನ ನ್ಯಾಯಾಲಯದ ಆದೇಶಗಳಿಂದ ಕಂಡುಬಂದಂತೆ, ದಾವೆಯಲ್ಲಿ ಒಳಗೊಂಡ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದಂತೆ ಯಾವ ನಿರ್ಣಯವು ದಾಖಲಾಗಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು, ಸಂದಾಯ ಮಾಡಬೇಕಾದ ನ್ಯಾಯಾಲಯ ಶುಲ್ಕದ ಪರಿಮಾಣಕ್ಕೆ ಹಾಗು ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ನಿರ್ಧರಿಸುವಂಥ ದಾವಾ ಸ್ವತ್ತಿನ ವಾಸ್ತವಿಕ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಕಾರರಿಗೂ ಅವಕಾಶವನ್ನು ಒದಗಿಸುವ ಮೂಲಕ ನಿರ್ಣಯವನ್ನು ದಾಖಲಿಸಬೇಕಾಗಿರುತ್ತದೆ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯವು 5,00,000/– ರೂ. ಗಳಿಗಿಂತ ಹೆಚ್ಚಾಗಿದ್ದಲ್ಲಿ, ಅಧೀನ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಹೊಂದಿರುವಂಥ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಾದ ವಾದಪತ್ರವನ್ನು ಹಿಂದಿರುಗಿಸಬೇಕಾಗಿರುತ್ತದೆ. 5,00,000/– ರೂ. ಗಳಿಗಿಂತ ಕಡಿಮೆಯಿದ್ದಲ್ಲಿ, ಅಧೀನ ನ್ಯಾಯಾಲಯವು, ಸರಿಯಾದ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಲು ವಾದಿಗಳಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ, ಪ್ರಸ್ತುತ ಪ್ರಕರಣದೊಂದಿಗೆ ಮುಂದುವರೆಯುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ. ಪ್ರಸ್ತಾಪಿಸಲಾದ ಅಂಶಕ್ಕೆ ಈ ರೀತಿ ಉತ್ತರಿಸಲಾಗಿರುತ್ತದೆ.

ತದನುಸಾರವಾಗಿ, ರಿಟ್ ಅರ್ಜಿಯನ್ನು ಭಾಗಶಃ ಅಂಗೀಕರಿಸಲಾಗಿರುತ್ತದೆ.

ಅರ್ಜಿದಾರರ ಪರ: ಶ್ರೀ ಎಂ.ಜಿ. ನಾಗನುರಿ ಮತ್ತು ಕುಮಾರಿ ರೇಖಾ ಪಾಟೀಲ್, ವಕೀಲರು'

1 ರಿಂದ 4ನೇ ಪ್ರತ್ಯರ್ಜಿದಾರರ ಪರ: ಶ್ರೀ ಸಚಿನ್ ಎಸ್. ಮಗದುಮ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಬಿ.ಎಸ್. ಪಾಟೀಲ್:**

ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರರು, ದಾವೆಯನ್ನು ಅಧಿವಿಚಾರಿಸಲು ಹಾಗೂ ಪುರಸ್ಕರಿಸಲು ಮೌಲ್ಯಧಾರಿತ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಅಭಿಪ್ರಾಯಪಡುವುದರ ಮೂಲಕ ವಾದಪತ್ರವನ್ನು ಹಿಂದಿರುಗಿಸಲು ನ್ಯಾಯಾಲಯವನ್ನು ಕೋರಿ ಸಿವಿಲ್ ಪ್ರಕ್ರಿಯಾ ಸಂಹಿತೆಯ VIIನೇ ಕ್ರಮಾದೇಶದ 10ನೇ ನಿಯಮದಡಿಯಲ್ಲಿ ಅವರು ಸಲ್ಲಿಸಿರುವ ಐ.ಎ.ಸಂ.7ನ್ನು ತಿರಸ್ಕರಿಸಿ ಅಧೀನ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಪ್ರಶ್ನಿಸಿರುತ್ತಾರೆ. ಪ್ರತಿವಾದಿಗಳು, ದಾವೆಯನ್ನು ಯುಕ್ತವಾಗಿ ಮೌಲ್ಯಮಾಪನ ಮಾಡಿರುವುದಿಲ್ಲವೆಂದೂ, ಸಂದಾಯ ಮಾಡಿರುವ ನ್ಯಾಯಾಲಯ ಶುಲ್ಕ ಯುಕ್ತವಾಗಿಯೂ ಹಾಗೂ ಸರಿಯಾಗಿಯೂ ಇಲ್ಲವೆಂದು ವಾದಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಗಳ ಈ ವಾದವನ್ನು ನಿರಾಕರಿಸಿ, ಕರ್ನಾಟಕ ನ್ಯಾಯಾಲಯಗಳ ಶುಲ್ಕಗಳು ಹಾಗೂ ದಾವೆಗಳ ಮೌಲ್ಯಮಾಪನ, 1958 (ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ನ್ಯಾಯಾಲಯಗಳ ಶುಲ್ಕಗಳ ಅಧಿನಿಯಮ' ಎಂದು ಉಲ್ಲೇಖಿಸಲಾಗಿದೆ)ದ 41 (1)(ಡಿ) ಪ್ರಕರಣದಡಿಯಲ್ಲಿ ದಾವೆಯನ್ನು ಮೌಲ್ಯಮಾಪನ ಮಾಡುವ ಮೂಲಕ ವಾದಿಗಳು ಸಂದಾಯ ಮಾಡಿರುವ ನ್ಯಾಯಾಲಯ ಶುಲ್ಕವು ಸರಿಯಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ.

2. ಈ ದಾವೆಯನ್ನು, ಇಲ್ಲಿನ ಅರ್ಜಿದಾರರ ವಿರುದ್ಧ 1 ರಿಂದ 4ರ ವರೆಗಿನ ಪ್ರತ್ಯರ್ಜಿದಾರರು, ಅಲ್ಲದೆ 5ನೇ ಪ್ರತ್ಯರ್ಜಿದಾರರು, ನಿರ್ದಿಷ್ಟ ಪರಿಹಾರ ಅಧಿನಿಯಮದ 6ನೇ ಪ್ರಕರಣದಡಿಯಲ್ಲಿ, ಪ್ರತಿವಾದಿಗಳು ವಾದಿಗಳನ್ನು ಕಾನೂನು ಬಾಹಿರವಾಗಿ ಸ್ವಾಧೀನ ತಪ್ಪಿಸಿರುತ್ತಾರೆಂದು ಆಪಾದಿಸಿ ವಾದಿಗಳಿಗೆ ದಾವಾ ಸ್ವತ್ತಿನ ರಿಕ್ತ ಅಧಿಭೋಗವನ್ನು ಕೂಡಲೇ ಹಸ್ತಾಂತರಿಸಲು ಪ್ರತಿವಾದಿಗಳಿಗೆ ನಿರ್ದೇಶನ ಕೋರಿ ಸಲ್ಲಿಸಲಾಗಿರುತ್ತದೆ. ವಾದಿಗಳು ದಾವಾ ಅನುಸೂಚಿತ ಆವರಣದಲ್ಲಿನ ಬಾಡಿಗೆದಾರರಾಗಿದ್ದು, ಪ್ರತಿವಾದಿಗಳು ಅವರನ್ನು ಕಾನೂನು ಬಾಹಿರವಾಗಿ 1ನೇ

ಫೆಬ್ರವರಿ 2014 ರಂದು ಸ್ವಾಧೀನ ತಪ್ಪಿಸಿರುತ್ತಾರೆಂಬುದು ವಾದಿಗಳ ವಾದವಾಗಿರುತ್ತದೆ.

3. ಪ್ರತಿವಾದಿಗಳು ಲಿಖಿತ ಹೇಳಿಕೆಗಳನ್ನು ಸಲ್ಲಿಸಿದ್ದು, ದಾವೆಯನ್ನು ಪ್ರತಿರೋಧಿಸಿರುತ್ತಾರೆ. ಅವರು ಇತರೆ ವಿಷಯಗಳ ಜೊತೆಗೆ, 41 (1)(ಡಿ) ಪ್ರಕರಣದಡಿಯಲ್ಲಿ ದಾವಾಸ್ವತ್ತಿಗೆ ನಿಗದಿಮಾಡಿದ ಮೌಲ್ಯ ಹಾಗೂ ಕೋರಿದ ಪರಿಹಾರ ಯುಕ್ತವಾಗಿರುವುದಿಲ್ಲವೆಂದೂ, ನ್ಯಾಯಾಲಯ ಶುಲ್ಕ ಅಧಿನಿಯಮದ 28ನೇ ಪ್ರಕರಣದ ಮೇರೆಗೆ, ನಿರ್ದಿಷ್ಟ ಪರಿಹಾರ ಅಧಿನಿಯಮದ 6ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಸ್ಥಿರಾಸ್ತಿಯ ಅಧಿಭೋಗಕ್ಕೆ ಸಂಬಂಧಿಸಿದ ದಾವೆಯಲ್ಲಿ, ಶುಲ್ಕವನ್ನು ಸ್ವತ್ತಿನ ಮಾರುಕಟ್ಟೆ ಮೌಲ್ಯದ ಒಂದೂವರೆಯಷ್ಟು ಅಥವಾ 1,000/– ರೂ. ಗಳನ್ನು, ಇದರಲ್ಲಿ ಯಾವುದು ಹೆಚ್ಚೋ ಅಷ್ಟನ್ನು ಲೆಕ್ಕ ಹಾಕತಕ್ಕದ್ದೆಂದು ಉಪಬಂಧಿಸಬೇಕೆಂದು ವಾದಿಸಲಾಗಿದೆ. ವಾಸ್ತವವಾಗಿ, ಈ ಆಯಾಮದಲ್ಲಿ, ಅಧೀನ ನ್ಯಾಯಾಲಯವು ಈ ಮೊದಲು, ಈ ನ್ಯಾಯಾಲಯದ ಮುಂದೆ ಪ್ರಶ್ನಿಸಿರುವಂಥ ವಾದಿಗಳ ಪರವಾಗಿನ ಆದೇಶವನ್ನು ಹೊರಡಿಸಿರುತ್ತದೆ. ಹಾಗೂ ಈ ನ್ಯಾಯಾಲಯವು ರಿಟ್ ಅರ್ಜಿ ಸಂ.105177/2014 ರಲ್ಲಿ ಹೊರಡಿಸಿದ 2014 ಆಗಸ್ಟ್ 11 ರಂದಿನ ಆದೇಶದ ಮೇರೆಗೆ ಎರಡೂ ಕಡೆಗೆ ಅವಕಾಶವನ್ನು ಕಲ್ಪಿಸುವ ಮೂಲಕ ಹೊಸದಾಗಿ ಪರಿಗಣಿಸಲು ವಿಷಯವನ್ನು ಪುನರ್ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸಿರುತ್ತದೆ. ಆ ತರುವಾಯ, ಪ್ರತಿವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ VIIನೇ ಕ್ರಮಾದೇಶದ 10ನೇ ನಿಯಮದಡಿಯಲ್ಲಿ, ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯವು 1,79,05,674/– ಎಂದು ಇತರೆ ವಿಷಯಗಳೊಂದಿಗೆ ವಾದಿಸಿ ಅರ್ಜಿ ಸಲ್ಲಿಸಿರುತ್ತಾರೆ ಹಾಗು ಆದ್ದರಿಂದ, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವು ಮೌಲ್ಯಧಾರಿತ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಹಾಗಾಗಿ, ವಾದಪತ್ರವನ್ನು, ದಾವೆಯನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಯುಕ್ತವಾದ ನ್ಯಾಯಾಲಯದ ಮುಂದೆ ಸಲ್ಲಿಸಲು ಹಿಂದಿರುಗಿಸಬಹುದಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಉಭಯ ಪಕ್ಷಕಾರರನ್ನು ಸುನಾವಣೆ ಮಾಡಿ, ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತದೆ. ಇದರಿಂದ ಬಾಧಿತರಾದವರು ಈ ನ್ಯಾಯಾಲಯದ ಮುಂದೆ ಪ್ರತಿವಾದಿಗಳಾಗಿರುತ್ತಾರೆ.

4. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ.ಜಿ. ನಾಗನುರಿ ಹಾಗೂ 1 ರಿಂದ 4ರವರೆಗಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಸಚಿನ್ ಎಸ್. ಮಗದುಮ್ ರವರುಗಳ ವಾದಗಳನ್ನು ಆಲಿಸಿರುತ್ತೇನೆ.

5. ವಾದಗಳು ಹಾಗೂ ಪ್ರಶ್ನಿತ ಆದೇಶದ ಪರಿಶೀಲನೆಯಿಂದ, ನನ್ನ ಪರಿಗಣನೆಗಾಗಿ ಈ ಮುಂದಿನ ಒಂದೇ ಒಂದು ಅಂಶವು ಉದ್ಭವಿಸಿರುತ್ತದೆ, ಅದೆಂದರೆ,

> *ಕರ್ನಾಟಕ ನ್ಯಾಯಾಲಯ ಶುಲ್ಕಗಳು ಹಾಗು ದಾವೆಗಳ ಮೌಲ್ಯಮಾಪನ ಅಧಿನಿಯಮ, 1958ರ 41(1)(ಡಿ) ಪ್ರಕರಣದಡಿಯಲ್ಲಿನ ದಾವೆಯುಲ್ಲಿ ವಾದಿಗಳು ಕೋರಿರುವ ಪರಿಹಾರವು ನ್ಯಾಯಯುತವಾದುದು ಹಾಗೂ ಸರಿಯಾದುದು ಎಂದು ಅಧೀನ ನ್ಯಾಯಾಲಯವು ಅಭಿಪ್ರಾಯಪಟ್ಟಿರುವುದು ಸಮಂಜಸವೇ ಅಥವಾ ಸಮರ್ಥನೀಯವೇ?*

6. ನ್ಯಾಯಾಲಯ ಶುಲ್ಕಗಳು ಅಧಿನಿಯಮದ 28ನೇ ಪ್ರಕರಣವು ಈ ಮುಂದಿನಂತಿದೆ:

> ***"28. 1877ನೇ ಇಸವಿಯ ಸ್ಪೆಸಿಫಿಕ್ ರಿಲೀಫ್ (ನಿರ್ದಿಷ್ಟ ಪರಿಹಾರ) ಆಕ್ಟ್: ಮೇರೆಗೆ ಸ್ವಾಧೀನದ ಸಲುವಾಗಿನ ದಾವೆಗಳು:–*** *ಸ್ಪೆಸಿಫಿಕ್ ರಿಲೀಫ್ (ನಿರ್ದಿಷ್ಟ ಪರಿಹಾರ) ಅಧಿನಿಯಮ, 1877ರ (1877ರ 1 ಕೇಂದ್ರ ಅಧಿನಿಯಮ) 9ನೇ ಪ್ರಕರಣದ ಮೇರೆಗೆ ಸ್ಥಿರ ಸ್ವತ್ತಿನ ಸ್ವಾಧೀನದ ಸಲುವಾಗಿನ ದಾವೆಯಲ್ಲಿ, ಸ್ವತ್ತಿನ ಮಾರುಕಟ್ಟೆ – ಮೌಲ್ಯದ ಅರ್ಧದಷ್ಟು ಅಥವಾ ಒಂದುನೂರು ರೂಪಾಯಿಗಳು, ಇವುಗಳಲ್ಲಿ ಹೆಚ್ಚಿನದರ ಮೇಲೆ ಫೀಜನ್ನು ಪರಿಗಣಿಸತಕ್ಕದ್ದು."*

7. 28ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ನಿರ್ದಿಷ್ಟ ಪರಿಹಾರ ಅಧಿನಿಯಮ, 1877 (1877ರ ಕೇಂದ್ರ ಅಧಿನಿಯಮ 1)ರ 9ನೇ ಪ್ರಕರಣವು, ಪ್ರಸ್ತುತ ನಿರ್ದಿಷ್ಟ ಪರಿಹಾರ ಅಧಿನಿಯಮ, 1963 (1963ರ 47) ರ 6ನೇ ಪ್ರಕರಣದಲ್ಲಿ ಕಂಡುಬಂದಿದ್ದು, ಅದು ಈ ಮುಂದಿನಂತಿರುತ್ತದೆ:

> ***"6. ಸ್ಥಿರ ಸ್ವತ್ತಿನ ಸ್ವಾಧೀನ ಕಳೆದುಕೊಂಡ ವ್ಯಕ್ತಿಯಿಂದ ದಾವೆ.–*** *(1) ಯಾವನೇ ವ್ಯಕ್ತಿಯ ಸ್ಥಿರ ಸ್ವತ್ತಿನ ಸ್ವಾಧೀನವನ್ನು ವಿಧಿಯ ಯುಕ್ತ ಕ್ರಮದಿಂದಲ್ಲದೆ ಅವನ ಸಮ್ಮತಿ ಇಲ್ಲದೆ ತಪ್ಪಿಸಿರುವಲ್ಲಿ ಅವನು ಅಥವಾ ಅವನ ಮೂಲಕ ಹಕ್ಕು ಸಾಧಿಸುವ ಯಾವನೇ ವ್ಯಕ್ತಿಯು, ದಾವೆಯ ಮೂಲಕ, ಅಂಥ ದಾವೆಯಲ್ಲಿ ಬೇರೆ ಯಾವುದೇ ಹಕ್ಕನ್ನು ಮಂಡಿಸಬಹುದಾದರೂ, ಅದು ಸ್ವಾಧೀನವನ್ನು ಪಡೆದುಕೊಳ್ಳಬಹುದು.*
>
> *(2) ಈ ಪ್ರಕರಣದ ಮೇರೆಗೆ ಯಾವ ದಾವೆಯನ್ನೂ,–*
>
> *(ಎ) ಸ್ವಾಧೀನ ಕಳೆದುಕೊಂಡ ತಾರೀಖಿನಿಂದ ಆರು ತಿಂಗಳು ಗತಿಸಿದ ಬಳಿಕ, ಅಥವಾ*
>
> *(ಬಿ) ಸರ್ಕಾರದ ವಿರುದ್ಧ,*
>
> *–ಹೂಡತಕ್ಕದ್ದಲ್ಲ.*
>
> *(3) ಈ ಪ್ರಕರಣದ ಮೇರೆಗೆ ಹೂಡಿದ ಯಾವುದೇ ದಾವೆಯಲ್ಲಿ ಮಾಡಿದ ಯಾವುದೇ ಆದೇಶದ ಅಥವಾ ಡಿಕ್ರಿಯ ಮೇಲೆ ಯಾವ ಅಪೀಲೂ ಇರತಕ್ಕದ್ದಲ್ಲ ಮತ್ತು ಅಂಥ ಯಾವುದೇ ಆದೇಶ ಅಥವಾ ಡಿಕ್ರಿಯ ಪುನರವಲೋಕನೆಗೆ ಅವಕಾಶವಿರತಕ್ಕದ್ದಲ್ಲ.*

*(4) ಈ ಪ್ರಕರಣದಲ್ಲಿರುವುದಾವುದೂ, ಯಾವನೇ ವ್ಯಕ್ತಿಯು ಅಂಥ ಸ್ವತ್ತಿಗೆ ತನಗಿರುವ ಹಕ್ಕನ್ನು ಸ್ಥಾಪಿಸುವುದಕ್ಕೆ ಮತ್ತು ಅದನ್ನು ಪುನಃ ಸ್ವಾಧೀನ ಪಡೆದುಕೊಳ್ಳುವುದಕ್ಕೆ ಅಡ್ಡಿಯಾಗತಕ್ಕದ್ದಲ್ಲ.*

8. ಯಾವುದೇ ಸ್ಥಿರಾಸ್ತಿಯನ್ನು ಒಬ್ಬ ವ್ಯಕ್ತಿಯ ಸಮ್ಮತಿಯಿಲ್ಲದೆ ಕಾನೂನು ಬಾಹಿರವಾಗಿ ಸ್ವಾಧೀನ ತಪ್ಪಿಸಿಕೊಂಡಂಥ ಆತನು, ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ 6ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಂದ ಸ್ವಾಧೀನ ತಪ್ಪಿದ ದಿನಾಂಕದಿಂದ ಆರು ತಿಂಗಳೊಳಗೆ ದಾವೆಯನ್ನು ಸಲ್ಲಿಸುವ ಮೂಲಕ ಸದರಿ ಸ್ವತ್ತಿನ ಸ್ವಾಧೀನವನ್ನು ಮರಳಿಪಡೆಯುವ ಹಕ್ಕಿನೊಂದಿಗೆ ಉಪಭೋಗಿಸಿರುತ್ತಾನೆಂಬುದು ಹಾಗು ಅಂಥ ದಾವೆಯನ್ನು ಹೊರಡಿಸಿದ ಡಿಕ್ರಿಯ ವಿರುದ್ಧ ಯಾವುದೇ ಅಪೀಲನ್ನು ಹೂಡತಕ್ಕದ್ದಲ್ಲವೆಂಬುದು ತಿಳಿದುಬಂದಿರುತ್ತದೆ. ಇಂಥ ದಾವೆಯಲ್ಲಿ ರೂಪಿಸಬಹುದಾದಂಥ ಯಾವುದೇ ಸ್ವಾಮ್ಯದಲ್ಲಿ ಏನೇ ಇದ್ದಾಗ್ಯೂ, ಸ್ವಾಧೀನ ತಪ್ಪಿಸಿಕೊಂಡ ವ್ಯಕ್ತಿಯು, ಅಧಿಭೋಗವನ್ನು ಮರಳಿಪಡೆಯುವುದಕ್ಕೆ ಸಂಬಂಧಿಸಿದ ದಾವೆಯನ್ನು ಆರಂಭಿಸಲು ಹಕ್ಕುಳ್ಳವರಾಗಿರುತ್ತೆಂಬುದು ಮತ್ತೊಂದು ವಿಶೇಷ ಉಪಬಂಧವಾಗಿರುತ್ತದೆ. ಸದರಿ ದಾವೆಯನ್ನು ಕ್ಷಿಪ್ರ ವ್ಯವಹರಣೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಅಧಿವಿಚಾರಿಸಬೇಕಾಗಿರುತ್ತದೆ.

9. ವಾದಿಯು, ಗೇಣಿದಾರಿಕೆಯನ್ನು ವಜಾಗೊಳಿಸದೆ ಸ್ವತ್ತನ್ನು ಸಿಂಧುವಾದ ಗೇಣಿದಾರನಾಗಿ ಇದ್ದಾಗ್ಯೂ, ಇತರೆ ವಿಷಯಗಳನ್ನು ವಾದಿಸಿ ಈತನನ್ನು ಭೂಮಾಲೀಕರು ಕಾನೂನುಬಾಹಿರವಾಗಿ ತೆರವುಗೊಳಿಸಿರುತ್ತಾರೆಂದು ನಿರ್ದಿಷ್ಟ ಪರಿಹಾರ ಅಧಿನಿಯಮದ 6ನೇ ಪ್ರಕರಣವನ್ನು ಆಧರಿಸಿ ದಾವೆಯನ್ನು ಆರಂಭಿಸುವುದನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ನ್ಯಾಯಾಲಯ ಶುಲ್ಕ ಹಾಗೂ ಅಧಿಕಾರ ವ್ಯಾಪ್ತಿಯ ಉದ್ದೇಶಕ್ಕಾಗಿ ಸ್ವತ್ತನ್ನು ಮೌಲ್ಯಮಾಪನ ಮಾಡುವಾಗ, ಈತ ನ್ಯಾಯಾಲಯ ಶುಲ್ಕಗಳ ಅಧಿನಿಯಮದ 41(1)(ಡಿ) ಪ್ರಕರಣವನ್ನು ಆಧರಿಸಲು ನಿರ್ಧರಿಸಿರುತ್ತಾರೆ. ಸದರಿ ಉಪಬಂಧಗಳು, ಭೂ ಮಾಲೀಕರು ಗೇಣಿದಾರರನ್ನು ಕಾನೂನುಬಾಹಿರವಾಗಿ ತೆರವುಗೊಳಿಸದಂಥ ಸ್ಥಿರಾಸ್ತಿಯನ್ನು ಪುನಃ ಸ್ವಾಧೀನ ಪಡಿಸಿಕೊಳ್ಳಲು ಸಿವಿಲ್ ನ್ಯಾಯಾಲಯದ ಮುಂದೆ ಭೂ ಮಾಲೀಕರು ಹಾಗೂ ಗೇಣಿದಾರರ ನಡುವೆ

ದಾವೆಗಳನ್ನು ಹೂಡಿದ ಸಂದರ್ಭದಲ್ಲಿ, ಶುಲ್ಕವನ್ನು, ವಾದಪತ್ರವನ್ನು ಹಾಜರು ಪಡಿಸಿದ ದಿನಾಂಕಕ್ಕೆ ಮೊದಲು ಮುಂಬರುವ ವರ್ಷಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬಹುದಾದ ದಾವೆಗೆ ಸಂಬಂಧಪಡುವ ಸ್ಥಿರಾಸ್ತಿಗೆ ಸಂಬಂಧಿಸಿದ ಬಾಡಿಗೆಯ ಮೊಬಲಗಿನ ಮೇಲೆ ವಿಧಿಸತಕ್ಕದ್ದು. ಆದ್ದರಿಂದ, ವಾದಿಗಳು, ನ್ಯಾಯಾಲಯ ಶುಲ್ಕ ಹಾಗೂ ಅಧಿಕಾರವ್ಯಾಪ್ತಿಯ ಸಂದಾಯದ ಉದ್ದೇಶಕ್ಕಾಗಿ ಪ್ರತೀ ತಿಂಗಳು 500/– ರೂ.ಗಳ ದರದಲ್ಲಿ 6000/– ರೂ.ಗಳ ವಾರ್ಷಿಕ ಬಾಡಿಗೆಯನ್ನು ಗಮನದಲ್ಲಿಟ್ಟುಕೊಂಡು, 6000/– ರೂ.ಗಳ ಮೊಬಲಗಿನ ಮೇಲೆ 150/– ರೂ.ಗಳ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಬೇಕಾಗಿರುತ್ತದೆ.

10. ನ್ಯಾಯಾಲಯ ಶುಲ್ಕಗಳ ಅಧಿನಿಯಮದ 41(1)(ಡಿ) ಪ್ರಕರಣವು, 'ಮಾಲೀಕನಿಂದ ಕಾನೂನಿನ ವಿರುದ್ಧವಾಗಿ ಸ್ಥಿರ ಸ್ವತ್ತಿನಿಂದ ಉಚ್ಚಾಟಿಸಲ್ಪಟ್ಟ ಗೇಣಿದಾರನು ಅದರ ಅಧಿಬೋಗವನ್ನು ಪುನಃ ಪಡೆಯುವುದಕ್ಕೆ' ಸಂಬಂಧಿಸಿದಂತೆ ವ್ಯವಹರಿಸುತ್ತದೆ. ಆದ್ದರಿಂದ, ಸಾಮಾನ್ಯ ಸಂದರ್ಭಗಳಲ್ಲಿ ವಾದಿಗಳು, ಕಾನೂನು ಬಾಹಿರ ಉಚ್ಚಾಟನೆಯನ್ನು 41(1)(ಡಿ) ಪ್ರಕರಣದ ಮೇರೆಗೆ ಕೋರಿದ ಪರಿಹಾರದ ಮೂಲಕ ಲೆಕ್ಕ ಹಾಕಬೇಕೆಂದು ಕೋರಿ ನಿಯತ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ, ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ 6ನೇ ಪ್ರಕರಣದಡಿಯಲ್ಲಿ ನಿರ್ದಿಷ್ಟವಾಗಿ ದಾವೆಯನ್ನು ಸಲ್ಲಿಸಿರುತ್ತಾರೆಂಬುದು ಇಲ್ಲಿನ ವಾದವಾಗಿರುತ್ತದೆ. ನ್ಯಾಯಾಲಯಗಳ ಶುಲ್ಕಗಳ ಅಧಿನಿಯಮದ 28ನೇ ಪ್ರಕರಣವು, ನಿರ್ದಿಷ್ಟ ಪರಿಹಾರ ಅಧಿನಿಯಮದ 9ನೇ ಪ್ರಕರಣ (ಪ್ರಸ್ತುತ 6ನೇ ಪ್ರಕರಣ) ದಡಿಯಲ್ಲಿ ಸ್ಥಿರಾಸ್ತಿಯ ಸ್ವಾಧೀನಕ್ಕಾಗಿ ದಾವೆಯನ್ನು ಸಲ್ಲಿಸಿರುವಲ್ಲಿ ಶುಲ್ಕವನ್ನು ಸ್ವತ್ತಿನ ಮಾರುಕಟ್ಟೆ ಮೌಲ್ಯದ ಒಂದೂವರೆಯಷ್ಟು ಅಥವಾ 1000/– ರೂ. ಗಳು ಇದರಲ್ಲಿ ಯಾವುದು ಹೆಚ್ಚೋ ಅಷ್ಟನ್ನು ಲೆಕ್ಕ ಹಾಕತಕ್ಕದ್ದು. ವಿಶೇಷ ಉಪಬಂಧವನ್ನು, ನಿರ್ದಿಷ್ಟ ಪರಿಹಾರ ಅಧಿನಿಯಮದ 6ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ದಾವೆಯನ್ನು ನಿರ್ವಹಿಸುವಂತೆ ಮಾಡುವಾಗ, ವಾದಿಗಳು 41(1)(ಡಿ) ಪ್ರಕರಣದಡಿಯಲ್ಲಿ ಮಾಡಿದ ಸಾಮಾನ್ಯ ಉಪಬಂಧಗಳನ್ನು ವಾದಿಗಳು ಅವಲಂಬಿಸುವಂತಿರುವುದಿಲ್ಲ. ನ್ಯಾಯಾಲಯ ಶುಲ್ಕಗಳ ಅಧಿನಿಯಮದ 28ನೇ ಪ್ರಕರಣವನ್ನು ಅಧಿನಿಯಮಿಸುವಲ್ಲಿ ಹಾಗೂ ನಿರ್ದಿಷ್ಟ ಪರಿಹಾರ ಅಧಿನಿಯಮದ 9ನೇ ಪ್ರಕರಣ (ಪ್ರಸ್ತುತ 6ನೇ ಪ್ರಕರಣ) ದಡಿಯಲ್ಲಿ ಸಲ್ಲಿಸಿದ ದಾವೆಗಳಿಗೆ ಅನ್ವಯಿಸುವಂತೆ ಮಾಡಿರುವಲ್ಲಿನ ವಿಧಾನಮಂಡಲದ

ಉದ್ದೇಶವು, ಸಾಮಾನ್ಯ ಉಪಬಂಧಗಳ ಅನ್ವಯನವನ್ನು ಪ್ರತಿಪಾದಿಸುವುದಾಗಿದ್ದು, ಇದು ಕಾನೂನು ಬಾಹಿರವಾಗಿ ಸ್ವಾಧೀನ ತಪ್ಪಿಸಿಕೊಂಡಿರುವಂಥ ವ್ಯಕ್ತಿಗಳು ಸ್ವಾಧೀನವನ್ನು ಕೋರಿ ನಿಯತ ದಾವೆಗಳ ಮೌಲ್ಯಮಾಪನಕ್ಕೆ ಅನ್ವಯವಾಗುತ್ತವೆ. 28ನೇ ಪ್ರಕರಣವನ್ನು ಈ ದಿಶೆಯಲ್ಲಿ ಅರ್ಥೈಸಿಕೊಳ್ಳಲಾಗದಿದ್ದಲ್ಲಿ, ತರುವಾಯ 28ನೇ ಪ್ರಕರಣವನ್ನು ಸೇರ್ಪಡೆ ಮಾಡಿರುವುದು ಅನಾವಶ್ಯಕವಾಗಿರುತ್ತದೆ.

11. ಯಾವುದೇ ಅಸ್ಪಷ್ಟತೆ ಅಥವಾ ಎದ್ದುಕಾಣುವ ಅಸಂಗತತೆ ಇದ್ದ ಹೊರತು, ಪರಿನಿಯಮಗಳ ಅರ್ಥವಿವರಣೆಯ ತತ್ವಗಳು, ಉಪಬಂಧಗಳನ್ನು ಅವುಗಳ ಸಾದಾ ಅರ್ಥವ್ಯಾಪ್ತಿಗಳನ್ನು ಆಧರಿಸಿಯೇ ಪರಿಗಣಿಸಬೇಕಾಗುತ್ತದೆಂಬುದನ್ನು ಮುನ್ನೆಲೆಗೆ ತರುತ್ತವೆ. 28ನೇ ಪ್ರಕರಣದಲ್ಲಿನ ಭಾಷೆಯ ಸಾದಾ ಅರ್ಥವು ನಿರ್ದಿಷ್ಟ ಪರಿಹಾರ ಅಧಿನಿಯಮದ 9ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಎಲ್ಲಾ ದಾವೆಗಳನ್ನು ಸ್ವತ್ತಿನ ಮಾರುಕಟ್ಟೆ ಮೌಲ್ಯದ ಒಂದೂವರೆಯಷ್ಟು ಅಥವಾ 1000/– ರೂ. ಗಳಷ್ಟು – ಇದರಲ್ಲಿ ಯಾವುದು ಹೆಚ್ಚೋ ಅದನ್ನು ಲೆಕ್ಕ ಹಾಕುವ ಮೂಲಕ 28ನೇ ಪ್ರಕರಣದ ಮೇರೆಗೆ ಲೆಕ್ಕ ಹಾಕಬೇಕಾಗಿರುತ್ತದೆಂಬುದನ್ನು ಸ್ಪಷ್ಟಪಡಿಸುತ್ತದೆ.

12. ನ್ಯಾಯಾಲಯ ಶುಲ್ಕಗಳ ಅಧಿನಿಯಮದ 28ನೇ ಪ್ರಕರಣದಡಿಯಲ್ಲಿ ಮೌಲ್ಯ ಮಾಪನಮಾಡಲು ದಾವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬಹುದಾದ ಶುಲ್ಕವು 41 (1)(ಡಿ) ಪ್ರಕರಣದಡಿಯಲ್ಲಿ ಸಂದಾಯ ಮಾಡಬಹುದಾದುದಕ್ಕಿಂತ ಹೆಚ್ಚಿನದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ವಾದಿಯನ್ನು ಹೆಚ್ಚಿನ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಿದ ಕಾರಣದಿಂದಲೇ, ಆತನಿಗೆ 41(1)(ಡಿ) ಪ್ರಕರಣದಡಿಯಲ್ಲಿ ದಾವೆಯನ್ನು ಮೌಲ್ಯಮಾಪನ ಮಾಡಲು ಅವಕಾಶ ನೀಡಿರುವುದಿಲ್ಲ. ಏಕೆಂದರೆ ಕಾನೂನು 28ನೇ ಪ್ರಕರಣದಡಿಯಲ್ಲಾಗಲೀ ಅಥವಾ 41(1)(ಡಿ) ಪ್ರಕರಣದಡಿಯಲ್ಲಾಗಲೀ ದಾವೆಯನ್ನು ಮೌಲ್ಯ ಮಾಪನ ಮಾಡುವ ಅವಕಾಶವನ್ನು ಆತನಿಗೆ ನೀಡಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು, 28ನೇ ಪ್ರಕರಣವನ್ನು ಅಧಿನಿಯಮಿತಿಗೊಳಿಸಿರುವ ಶಾಸಕಾಂಗದ ಉದ್ದೇಶ ಹಾಗೂ ಗುರಿಯನ್ನು ಗಮನಕ್ಕೆ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಆದೇಶವು ದೋಷ ಪೂರ್ಣವಾಗಿರುತ್ತದೆ.

ವಾದಿಯನ್ನು, ಸ್ವತ್ತಿನ ಮಾರುಕಟ್ಟೆ ಮೌಲ್ಯದ ಒಂದೂವರೆಯಷ್ಟು ಅಥವಾ 1000/– ರೂ.ಗಳೂ ಇದರಲ್ಲಿ ಯಾವುದು ಹೆಚ್ಚೋ ಅದನ್ನು ಸಂದಾಯ ಮಾಡಿರುವ ಮೂಲಕ 28ನೇ ಪ್ರಕರಣದಡಿಯಲ್ಲಿ ಕೋರಿದ ಪರಿಹಾರದ ಮೌಲ್ಯ ನಿಗದಿಗೆ ಅಗತ್ಯಪಡಿಸಲಾಗಿರುತ್ತದೆ.

13. ವಾದಪತ್ರವನ್ನು ಹಿಂತಿರುಗಿಸುವುದಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯನ್ನು ಗಮನಿಸಿದಾಗ, ಅಧೀನ ನ್ಯಾಯಾಲಯದ ಆದೇಶಗಳಿಂದ ಕಂಡುಬಂದಂತೆ, ದಾವೆಯಲ್ಲಿ ಒಳಗೊಂಡ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದಂತೆ ಯಾವ ನಿರ್ಣಯವು ದಾಖಲಾಗಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು, ಸಂದಾಯ ಮಾಡಬೇಕಾದ ನ್ಯಾಯಾಲಯ ಶುಲ್ಕದ ಪರಿಮಾಣಕ್ಕೆ ಹಾಗೂ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ನಿರ್ಧರಿಸುವಂಥ ದಾವಾ ಸ್ವತ್ತಿನ ವಾಸ್ತವಿಕ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಕಾರರಿಗೂ ಅವಕಾಶವನ್ನು ಒದಗಿಸುವ ಮೂಲಕ ನಿರ್ಣಯವನ್ನು ದಾಖಲಿಸಬೇಕಾಗಿರುತ್ತದೆ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯವು 5,00,000/– ರೂ. ಗಳಿಗಿಂತ ಹೆಚ್ಚಾಗಿದ್ದಲ್ಲಿ, ಅಧೀನ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಹೊಂದಿರುವಂಥ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಾದ ವಾದಪತ್ರವನ್ನು ಹಿಂದಿರುಗಿಸಬೇಕಾಗಿರುತ್ತದೆ. 5,00,000/– ರೂ. ಗಳಿಗಿಂತ ಕಡಿಮೆಯಿದ್ದಲ್ಲಿ, ಅಧೀನ ನ್ಯಾಯಾಲಯವು, ಸರಿಯಾದ ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡಲು ವಾದಿಗಳಿಗೆ ಯುಕ್ತ ಅವಕಾಶವನ್ನು ನೀಡಿದ ತರುವಾಯ, ಪ್ರಸ್ತುತ ಪ್ರಕರಣದೊಂದಿಗೆ ಮುಂದುವರೆಯುವ ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತದೆ. ಪ್ರಸ್ತಾಪಿಸಲಾದ ಅಂಶಕ್ಕೆ ಈ ರೀತಿ ಉತ್ತರಿಸಲಾಗಿರುತ್ತದೆ.

ರಿಟ್ ಅರ್ಜಿಯನ್ನು ಭಾಗಶಃ ಅಂಗೀಕರಿಸಲಾಗಿರುತ್ತದೆ. ಮೇಲೆ ತಿಳಿಸಲಾದ ಅಭಿಪ್ರಾಯಗಳ ಹಿನ್ನಲೆಯಲ್ಲಿ, ವಿಷಯವನ್ನು ಹೊಸದಾಗಿ ಪರಿಗಣಿಸಲು ಅಧೀನ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿರುತ್ತದೆ.

---